# ಸಂಪಾದಕೀಯ

## ಧರ್ಮದ ತಳಹದಿ

ಈಗಿನ ಭಾರತದ ಸಾಧ್ಯತೆಗಳ ಬಗ್ಗೆ ವಿಚಾರ ಸಂಕಿರಣವೊಂದನ್ನು ಏರ್ಪಡಿಸಿದರೆ ಅದರಲ್ಲಿ ಭಾಗವಹಿಸುವ ಅನೇಕರಿಗೆ ಎಲ್ಲವೂ ನಿರಾಶಾದಾಯಕವಾಗಿಯೇ ಕಂಡು ಬರುವುದರಲ್ಲಿ ಸಂದೇಹವಿಲ್ಲ. ಎಲ್ಲ ನಿಯಮಗಳನ್ನೂ ಉಲ್ಲಂಘಿಸಿ ಹೇಗಾದರೂ ಹಣ ಮಾಡುವುದೇ ಬಹಳ ಜನರ ಆದರ್ಶ(ಧರ್ಮ)ವಾಗಿರುವ ಈ ಉಸಿರುಗಟ್ಟಿಸುವ ವಾತಾವರಣದಲ್ಲಿ ಶಿಸ್ತು, ಆತ್ಮಸಾಕ್ಷಿ, ನೈತಿಕತೆಗಳನ್ನು ಅರಸುವುದು ಮೂಢತನವೆಂದೇ ಇಂತಹವರ ವಾದ. ಹಾಗೆಂದು ಇವರೇನೂ ಸಿನಿಕರಲ್ಲ. ವಾಸ್ತವದ ಅವ್ಯವಸ್ಥೆಯನ್ನು ಕಂಡು, ಮುಂಬರುವ ದಿನಗಳ ಬಗ್ಗೆ ಸಂದೇಹ ತುಂಬಿಕೊಂಡಿದ್ದು ಮುಂದೆ ಒಳಿತಾಗುತ್ತದೆ ಎಂಬ ಭರವಸೆಯಿಲ್ಲದವರು. ಇಂತಹ ದುಃಸ್ಥಿತಿ ಭಾರತಕ್ಕೆ ಹಿಂದೆಂದೂ ಬಂದೇ ಇರಲಿಲ್ಲವಾದ್ದರಿಂದ ಇನ್ನು ಇದರಿಂದ ಸುಧಾರಿಸಿಕೊಳ್ಳುವುದು ಅಸಾಧ್ಯವೇ ಸರಿ ಎಂಬುದು ಇಂತಹವರ ಅಭಿಮತ. "ಈಗಲೇ ಹೀಗೆ. ಇನ್ನು ಮುಂದಿನ ಗತಿ ಏನಪ್ಪಾ?" ಎಂದು ತಲೆಯ ಮೇಲೆ ಕೈಯಿಟ್ಟು ಕುಳಿತುಕೊಳ್ಳುವವರೂ ಇದ್ದಾರೆ. ಇತಿಹಾಸದ ವೈಭವದ ಬಗ್ಗೆ ಹೇಳಿದರೆ, "ಅದೆಲ್ಲ ಗತಕಾಲದ್ದು. ಈಗ ಏನು ತಾನೇ ಮಾಡುವುದು?" ಎಂದು ದಿಕ್ಕೆಟ್ಟವರಂತೆ ಹಲುಬುತ್ತಾರೆ.

### ನಮ್ಮ ನೈಜ ಸ್ಥಿತಿ

ಯಾವುದೇ ಪರಿಸ್ಥಿತಿಯನ್ನು ಎರಡು ದೃಷ್ಟಿಗಳಿಂದ ನೋಡುವ ಸಾಧ್ಯತೆಯಿದೆ. ಒಂದು ಸಕಾರಾತ್ಮಕ ದೃಷ್ಟಿ, ಮತ್ತೊಂದು ನಕಾರಾತ್ಮಕ ದೃಷ್ಟಿ. ಒಂದು ಕೊಡದಲ್ಲಿ ಅರ್ಧದಷ್ಟು ನೀರಿದ್ದರೆ "ಅಯ್ಯೋ! ಅರ್ಧದಷ್ಟು ಖಾಲಿಯಿದೆ" ಎಂದು ಕೊರಗುವವರು ನಕಾರಾತ್ಮಕ ಸ್ವಭಾವದವರು. "ಆಹಾ! ಅರ್ಧ ಕೊಡ ತುಂಬಿದೆ!" ಎನ್ನುವವರು ಸಕಾರಾತ್ಮಕ ಸ್ವಭಾವದವರು. ಮನೋವಿಜ್ಞಾನಿಗಳ ಅಭಿಮತದಂತೆ ಸಕಾರಾತ್ಮಕ ದೃಷ್ಟಿಯನ್ನು ಬೆಳೆಸಿಕೊಂಡವರು ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಪ್ರಯತ್ನಿಸುತ್ತಾರೆ, ಅವುಗಳ ಒತ್ತಡದಿಂದ ಮುಕ್ತರಾಗುತ್ತಾರೆ. ಸಮಸ್ಯೆಗಳು ಬಹಳ ದೊಡ್ಡದಾಗಿ ಕಂಡುಬಂದಾಗ ಪರಿಹಾರ ದೂರವಾಗುತ್ತ ಹೋಗುತ್ತದೆ. ಚಿಂತೆ, ಯೋಚನೆಗಳು, ಮನಸ್ಸಿನ ಎಲ್ಲ ಶಕ್ತಿ, ಸಾಮರ್ಥ್ಯಗಳನ್ನೂ ಅಪಹರಿಸಿದಾಗ ಮನುಷ್ಯ ನಿರ್ವೀರ್ಯನಾಗುತ್ತಾನೆ. ವ್ಯಕ್ತಿಯ ಬಾಳಿನಲ್ಲಿ ಇದು ಎಷ್ಟು ಸತ್ಯವೋ ರಾಷ್ಟ್ರದ ಬಾಳಿನಲ್ಲಿಯೂ ಅಷ್ಟೇ ಸತ್ಯ. ಸಾಮೂಹಿಕ ಚಿಂತನೆ, ಭಾವನೆಗಳು ನಿರಾಶಾದಾಯಕವಾಗಿದ್ದರೆ ಅಂತಹ ದೇಶ ಪ್ರಗತಿಯನ್ನು ಸಾಧಿಸಲಾರದು.

ಇತರ ಜನಾಂಗದವರು, ದೇಶದವರು ಸಾಧಿಸಿದ್ದ ಪ್ರಗತಿಗಿಂತ ಭಾರತೀಯರು ಬಹಳ ಹಿಂದೆಯೇ ಮುಂದುವರಿದಿದ್ದರು ಎಂಬುದನ್ನು ಇತಿಹಾಸ ತಿಳಿಸುತ್ತದೆ. ರಾಜಕೀಯ, ಆರ್ಥಿಕ ವ್ಯವಸ್ಥೆ, ಕೃಷಿವಿಜ್ಞಾನ, ಲೋಹವಿದ್ಯೆ, ಗಣಿತಶಾಸ್ತ್ರ, ಖಗೋಲ ವಿಜ್ಞಾನ, ಭಾಷಾಶಾಸ್ತ್ರ, ಕಾನೂನು ಹಾಗೂ ನಗರಗಳ ರಚನೆ—ಹೀಗೆ ಎಲ್ಲ ಕ್ಷೇತ್ರಗಳಲ್ಲೂ ಭಾರತವು ಮುಂದಿತ್ತು. ಇಂತಹ ಅದ್ಭುತ ಪರಂಪರೆಯಿದ್ದರೂ ನೂರಾರು ವರ್ಷಗಳ ದಾಸ್ಯವು ನಮ್ಮ ಜನಮಾನಸದಲ್ಲಿ ಭಯಭೀತಿಗಳನ್ನು ಹುಟ್ಟಿಸಿ, ಶ್ರದ್ಧೆಯನ್ನು ಕೊಂದಿತು. ಮಾನವನು ಕುಸಿದಾಗ ಅವನ ಎಲ್ಲ ಸೃಜನಾತ್ಮಕ ಶಕ್ತಿಯೂ ಕುಸಿಯುತ್ತದೆ. ಅಷ್ಟೇ ಅಲ್ಲ, ಅವನ ನೈತಿಕ ಪ್ರಜ್ಞೆಯೂ ಕುಸಿಯುತ್ತದೆ. ಇದು ತಮಸ್ಸಿನ ಲಕ್ಷಣ. ಗೀತೆಯಲ್ಲಿ (೧೮.೨೮) ಶ್ರೀಕೃಷ್ಣ ಹೇಳುವಂತೆ, "ಚಿತ್ತಸ್ಥೈರ್ಯವಿಲ್ಲದವನು, ಅಸಂಸ್ಕೃತನು, ದರ್ಪವುಳ್ಳವನು, ಮೋಸಮಾಡುವವನು, ಕುಬುದ್ಧಿಯುಳ್ಳವನು, ಮಾಡಬೇಕಾದ ಹಾಗೂ ಮಾಡುತ್ತಿರುವ ಕೆಲಸದಲ್ಲಿ ಆಸಕ್ತಿಯಿಲ್ಲದ ಅಲಸನು, ವಿಷಾದಿಸುವವನು ಹಾಗೂ ಮಂದ ಸ್ವಭಾವವುಳ್ಳವನು—ಇವರೆಲ್ಲ ತಮಸ್ಸನ್ನು ಪ್ರಧಾನವಾಗಿ ಹೊಂದಿರುವವರು."

ಸ್ವಾಮಿ ವಿವೇಕಾನಂದರು ಇದೇ ಮಾತುಗಳನ್ನು ಪುನರುಚ್ಚರಿಸಿ ಎಚ್ಚರಿಸುತ್ತಾರೆ: "ನಾನು ನಿಮ್ಮನ್ನು ಈ ಪ್ರಶ್ನೆ ಕೇಳುತ್ತೇನೆ, ನೀವು ಅದಕ್ಕೆ ಸಾವಧಾನದಿಂದ ಉತ್ತರ ಕೊಡಿ: ನಾವು ಸುಖದುಃಖಗಳಾಚೆ, ಎಲ್ಲ ಕರ್ಮವ್ಯಾಪಾರಗಳಿಂದಲೂ ದೂರವಾದ ಸಾತ್ತ್ವಿಕ ಸ್ಥಿತಿಯಲ್ಲಿರುವೆವೊ? ಅಥವಾ ನಿರ್ಜೀವಿಗಳಾಗಿ, ಸೋಮಾರಿಗಳಾಗಿ, ಯಾವ ಚಟುವಟಿಕೆಯೂ ಇಲ್ಲದೆ, ಮಣ್ಣಿನ ಹೆಂಟೆಯಂತೆ ಜಡವಾಗಿ ಯಾವ ಕಾರ್ಯವನ್ನೂ ಮಾಡದೇ ಇರುವಂತಹ ತಾಮಸಿಕ ಕೂಪದಲ್ಲಿ ಬಿದ್ದಿರುವೆವೊ? ಕೆಲಸವನ್ನು ಮಾಡುವುದಕ್ಕೆ ಚೈತನ್ಯವಿಲ್ಲದೆ, ಸದ್ದಿಲ್ಲದೆ ಕ್ರಮೇಣ ನಾಶವಾಗುತ್ತಿರುವ ಸ್ಥಿತಿಯಲ್ಲಿರುವೆವೊ? ಈ ಪ್ರಶ್ನೆಯನ್ನು ನಿಮಗೆ ನೀವೇ ಹಾಕಿಕೊಳ್ಳಿ. ಆಗ ಸತ್ಯ ಏನೆಂಬುದು ಗೊತ್ತಾಗುವುದು" (ಸ್ವಾಮಿ ವಿವೇಕಾನಂದರ ಬೋಧನೆಯ ಸಾರ, ಪು. ೧೧೪). ಕತ್ತಲನ್ನೇ ಬೆಳಕೆಂದು ತಿಳಿಯುವ ಮಂದಮತಿಗಳಂತೆ ಸತ್ತ್ವದ ಸೋಗು ಹಾಕಿದ ತಮಸ್ಸಿನ ಕೈಗೊಂಬೆಗಳಾಗಿದ್ದರೂ ನಮ್ಮ ದೇಶವು ಧರ್ಮದೇಶ, ನಾವು ಧಾರ್ಮಿಕರು ಎಂದು ಇತರ ಸಂಸ್ಕೃತಿಗಳನ್ನು ತಿರಸ್ಕರಿಸುತ್ತಿದ್ದ ನಮಗೆ ನಿರ್ದಾಕ್ಷಿಣ್ಯವಾಗಿ ನಿಜವನ್ನು ತೋರಿಸಿಕೊಟ್ಟವರು ಸ್ವಾಮೀಜಿ.

### ನಮ್ಮ ಮುಂದಿರುವ ಗುರಿ

ಮುಂದೆ ಸಾಧಿಸಬೇಕಾದದ್ದು ಬಹಳಷ್ಟು ಇದೆ ಎಂಬ ಒಂದು ಲಕ್ಷ್ಯವಿಲ್ಲದಿದ್ದರೆ ಮಾನವನ ಜೀವನವೇ ಅರ್ಥಹೀನವಾಗುತ್ತದೆ. ಅಂತೆಯೇ ಒಂದು ರಾಷ್ಟ್ರವೂ ಕೂಡ ಸಾಧಿಸಬೇಕಾದ್ದು ಬಹಳಷ್ಟು ಇರುತ್ತದೆ. ಅದು ಆಯಾ ಸಂಸ್ಕೃತಿ, ಪರಂಪರೆಗೆ ಅನುಗುಣವಾಗಿ ಬೇರೆ ಬೇರೆಯಾಗಿರಬಹುದು. ಬೆಳವಣಿಗೆಯು ಒಂದು ನಿರಂತರ ಪ್ರಕ್ರಿಯೆ. ತನ್ನ ಮೂಲ ಸ್ರೋತವನ್ನು ಗುರುತಿಸಿ ಅದರ ಆಧಾರದ ಮೇಲೆ ಇತರ ಬೆಳವಣಿಗೆಗಳನ್ನು ಸಾಧಿಸಿದಾಗ ಸರ್ವಾಂಗೀಣ ಅಭಿವೃದ್ಧಿ ಸಾಧ್ಯವಾಗುತ್ತದೆ. ಭಾರತೀಯರಲ್ಲಿ ಧಾರ್ಮಿಕ ನಂಬಿಕೆಗಳು ರಕ್ತಗತವಾಗಿವೆ. ಅವನ್ನು ಮುಕ್ತವಾಗಿ ಅಭಿವ್ಯಕ್ತಗೊಳಿಸುವ ವಾತಾವರಣ ತಯಾರಾದರೆ, ಆವರಿಸಿರುವ ತಮಸ್ಸು ಮಾಯವಾಗಿ ಕ್ರಿಯಾಶೀಲವಾದ ರಜಸ್ಸು ಹಾಗೂ ಸತ್ವಗುಣಗಳು ಹೊರಬರುತ್ತವೆ. ಇತ್ಯಾತ್ಮಕ ಮನೋಭಾವದಿಂದ ನಮ್ಮಲ್ಲಿರುವ ಬಲಗಳನ್ನು ಗುರುತಿಸಿಕೊಂಡು, ಧೃತಿಗೆಡದೆ ಪ್ರಯತ್ನಶೀಲರಾದರೆ ಅಸಾಧ್ಯವಾದದ್ದು ಏನೂ ಇರುವುದಿಲ್ಲ. ಹಾಗೆ ನಾವು ಮಾಡದೇ ಹೋದರೆ ಮತ್ತಷ್ಟು ಅವನತಿಯೇ ನಮ್ಮನ್ನು ಕಾಡುವುದು ಖಚಿತ.

> **ಪಾಶ್ಚಾತ್ಯ ನಾಗರಿಕತೆಯು ತನ್ನ ಹೊಸ ಗಳಿಕೆಯ ಗರ್ವದಲ್ಲಿ ಯಾವುದನ್ನು ಹಿಂದಿಕ್ಕಿಕೊಂಡಿತೋ, ಅನೇಕ ಅನಭಿವೃದ್ಧ ರಾಷ್ಟ್ರಗಳೂ ಕೂಡಾ ಪಾಶ್ಚಾತ್ಯ ಅನುಕರಣೆಯ ಛಲದಲ್ಲಿ ಯಾವುದನ್ನು ಹತ್ತಿಕ್ಕಿಕೊಂಡವೋ ಅಂಥ ಸ್ಮೃತಿಯು, ಬಹುಶಃ ಇಂಡಿಯಾದ ಅಖಂಡ ದೀರ್ಘ ಪ್ರವಹನಗಳಿಂದಾಗಿ ಇಲ್ಲಿ ಇವತ್ತಿಗೂ ಉಳಿದು ಬಂದಿದೆ.**
>
> **—ಕೆ.ವಿ. ಸುಬ್ಬಣ್ಣ.**

ಇಪ್ಪತ್ತನೇ ಶತಮಾನದ ಆದಿಭಾಗದಲ್ಲಿ ಸಂಭವಿಸಿದ ಎರಡು ಜಾಗತಿಕ ಮಹಾಯುದ್ಧಗಳು ಎಲ್ಲೆಡೆ ಜನರನ್ನು ಬಡಿದೆಬ್ಬಿಸಿದವು. ವಿನಾಶದ ಅಂಚಿನಲ್ಲಿ ನಿಂತ ಮಾನವನು ಆಯತಪ್ಪಿ ಬೀಳದೆ ಬದುಕುಳಿದ. ತಾಂತ್ರಿಕ ಹಾಗೂ ವೈಜ್ಞಾನಿಕ ಬೆಳವಣಿಗೆಯೊಂದಿಗೆ ದೇಶದೇಶಗಳ ನಡುವೆ ನಿರ್ಮಿತವಾಗಿದ್ದ ಕಬ್ಬಿಣದ ಗೋಡೆಗಳು ಪಾರದರ್ಶಕವಾಗಲು ಆರಂಭಿಸಿದವು. ಬದುಕು ಹೊಸದೃಷ್ಟಿಯನ್ನು ಪಡೆಯಲಾರಂಭಿಸಿತು. ಹಗೆತನಕ್ಕಿಂತ ಸಹಬಾಳ್ವೆ ಹಾಗೂ ಸಹಕಾರವೇ ಪ್ರಮುಖ ಎಂಬ ತಿಳಿವು ಕೆಲವೆಡೆಯಾದರೂ ಕಂಡುಬಂದಿತು. ಪ್ರತಿಯೊಂದು ರಾಷ್ಟ್ರವೂ ಸ್ವತಂತ್ರವಾಗಿ ಇರಬೇಕು, ಅದರ ಪ್ರಜೆಗಳು ಯಾವುದೇ ಒತ್ತಾಯ ಅಥವಾ ದೌರ್ಜನ್ಯಕ್ಕೊಳಗಾಗಬಾರದು ಎಂಬ ನಿಲುವು ತಾಳಿದ ರಾಷ್ಟ್ರಗಳು ಪ್ರಬಲವಾದಂತೆ, ಶೋಷಣೆ ಹಾಗೂ ಗುಲಾಮಗಿರಿಗಳು ರಾಜಕೀಯ ವಲಯಗಳಿಂದ ತಾತ್ತ್ವಿಕವಾಗಿಯಾದರೂ ಹಿಮ್ಮೆಟ್ಟಿದವು. ಭಾರತದ ಸ್ವಾತಂತ್ರ್ಯ, ದಕ್ಷಿಣ ಆಫ್ರಿಕದ ವರ್ಣಭೇದ ನೀತಿಯ ಅಂತ್ಯ—ಇವೆಲ್ಲ ಇದರ ಪ್ರತಿಫಲ. **ಪರಸ್ಪರಂ ಭಾವಯಂತಃ ಶ್ರೇಯಃ ಪರಮ್ ಅವಾಪ್ಸ್ಯಥ**—ಪರಸ್ಪರರ ಬಗ್ಗೆ ಭಾವಿಸುತ್ತ ಅತ್ಯುತ್ತಮವಾದ ಶ್ರೇಯಸ್ಸು (ದೀರ್ಘಕಾಲದ ಒಳಿತನ್ನು) ಗಳಿಸಿರಿ ಎಂಬ ಹಿತನುಡಿಯನ್ನು ಎಲ್ಲ ರಾಷ್ಟ್ರಗಳೂ ಇಂದಿನ ದಿನಗಳಲ್ಲಿ ಪಾಲಿಸಬೇಕಾಗಿ ಬಂದಿದೆ.

ಭಾರತದ ಪರಿಸ್ಥಿತಿಯನ್ನು ಗಮನಿಸಿದರೆ ಅನೇಕ ಸಮಸ್ಯೆಗಳಿದ್ದರೂ ಹಲವಾರು ಕ್ಷೇತ್ರಗಳಲ್ಲಿ ಅಸಾಧ್ಯವಾದ ಪ್ರಗತಿಯೂ ಆಗಿದೆ. ವಿದೇಶಗಳಲ್ಲಿ ಭಾರತೀಯರು ವೈದ್ಯಕೀಯ ಹಾಗೂ ತಾಂತ್ರಿಕ ಕ್ಷೇತ್ರಗಳಲ್ಲಿ ಸಾಮರ್ಥ್ಯವನ್ನು ಪ್ರದರ್ಶಿಸಿ ಬೌದ್ಧಿಕ ಮಟ್ಟದಲ್ಲಿ ಕೀರ್ತಿಯನ್ನು ಪುನಃ ತರುತ್ತಿದ್ದಾರೆ. ಪ್ರಜಾಪ್ರಭುತ್ವದ ಮಾದರಿಯಾಗಿಯೂ ಭಾರತ ಸುಪ್ರಸಿದ್ಧ. ರಾಷ್ಟ್ರಪತಿಗಳಾದ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಅಭಿಪ್ರಾಯದಂತೆ ೨೦೨೦ರ ವೇಳೆಗೆ ಭಾರತವು ಎಲ್ಲ ದೇಶಗಳಿಗಿಂತ ಹೆಚ್ಚು ಪ್ರಗತಿಯನ್ನು ಸಾಧಿಸಿರುತ್ತದೆ. ಯುವ ಶಕ್ತಿಯ ಸಂಪನ್ಮೂಲವನ್ನು ಬಳಸಿಕೊಂಡು ಆಧುನಿಕ ತಂತ್ರಜ್ಞಾನದೊಂದಿಗೆ ಭಾರತ ಈ ಪ್ರಗತಿಯನ್ನು ಸಾಧಿಸಬೇಕೆಂಬ 'ದೃಕ್ಪಥ ೨೦೨೦" (Vision 2020) ಕಾರ್ಯಪ್ರಣಾಲಿಯನ್ನು ಕಲಾಂ ಅವರು ಎಲ್ಲೆಡೆ ಸಾರುತ್ತಿದ್ದಾರೆ. ಭವಿಷ್ಯವನ್ನು ರೂಪಿಸುವಂತಹ ಕಾರ್ಯಕ್ರಮಗಳೊಂದಿಗೆ ನೈತಿಕತೆ ಹಾಗೂ ಜವಾಬ್ದಾರಿಯುತ ನಾಗರಿಕತ್ವದ ಬಗ್ಗೆಯೂ ಅವರು ಒತ್ತಿ ಹೇಳುತ್ತಿದ್ದಾರೆ. ಸಾಮಾಜಿಕ ಪಿಡುಗುಗಳಾದ ಭ್ರಷ್ಟಾಚಾರ, ಲಂಚಕೋರತನ, ಸೋಮಾರಿತನಗಳನ್ನು ಹೋಗಲಾಡಿಸಲು ಪ್ರಬುದ್ಧ ನಾಗರಿಕತ್ವದ ಆವಶ್ಯಕತೆಯಿದೆ ಎಂಬುದನ್ನು ಅವರು ಮಕ್ಕಳಿಗೂ ತಿಳಿಸಿಕೊಡುತ್ತಿದ್ದಾರೆ.

### ಧರ್ಮ ಎಂದರೇನು?

ಬಹಳ ಹಿಂದಿನಿಂದಲೂ ಭಾರತದಲ್ಲಿ ಧರ್ಮಕ್ಕೆ ಪ್ರಾಧಾನ್ಯವನ್ನು ನೀಡಲಾಗಿದೆ. 'ಧರ್ಮ' ಎಂಬ ಪದಕ್ಕೆ ಅನೇಕ ಅರ್ಥಗಳಿವೆ. Religion ಎಂಬ ಪದವನ್ನೂ ಧರ್ಮ ಸೂಚಿಸುತ್ತದೆ. ಅದರೊಂದಿಗೆ righteousness ಧಾರ್ಮಿಕ ನಂಬಿಕೆ, ನಡವಳಿಕೆ ಎಂಬರ್ಥವನ್ನೂ ಅದು ಒಳಗೊಂಡಿದೆ. ನಾಲ್ಕು ಪುರುಷಾರ್ಥಗಳಲ್ಲಿ ಮೊದಲು ಸಾಧಿಸಬೇಕಾದದ್ದು ಧರ್ಮ.

ಧರ್ಮದ ತಳಹದಿಯ ಮೇಲೆ ಆರ್ಥಿಕ ಹಾಗೂ ಬಯಕೆಗಳ ಕಟ್ಟಡವನ್ನು ಕಟ್ಟಿದಾಗ ಅದು ಪುರುಷನ ಪರಮಾರ್ಥಕ್ಕೆ ದಾರಿಯಾಗುವುದು. ನಮ್ಮಲ್ಲಿರುವ ವಸ್ತು ಅಥವಾ ಸಂಪತ್ತುಗಳಿಗಿಂತ ನಮ್ಮ ನಂಬಿಕೆ, ಶ್ರದ್ಧೆ, ಅಂತಃಸತ್ತ್ವಗಳೇ ಪ್ರಧಾನ ಎಂಬುದನ್ನು ಇದು ತಿಳಿಸುತ್ತದೆ. ಬಹಳ ಹಿಂದಿನಿಂದಲೂ ಭಾರತೀಯ ತತ್ತ್ವಚಿಂತನೆಯಲ್ಲಿ ಹಾಸುಹೊಕ್ಕಾಗಿರುವ 'ಧರ್ಮ' ಪದಕ್ಕೆ **ಯಯಾ ಧಾರ್ಯತೇ** ಅಂದರೆ ಯಾವುದು ಎಲ್ಲವನ್ನೂ ಹಿಡಿದಿಡಬಲ್ಲದೋ, ಒಂದುಗೂಡಿಸಬಲ್ಲದೋ, ಶಕ್ತಿಯನ್ನು ನೀಡುವುದೋ ಅದು ಎಂದು ಅರ್ಥೈಸಲಾಗಿದೆ.

**ಧಾರಣಾದ್ಧರ್ಮ ಇತ್ಯಾಹುರ್ಧರ್ಮೋ ಧಾರಯತೇ ಪ್ರಜಾಃ ।**
**ಯತ್ ಸ್ಯಾದ್ಧಾರಣಸಂಯುಕ್ತಂ ಸ ಧರ್ಮ ಇತಿ ನಿಶ್ಚಯಃ ॥**

ಯಾವುದು ಧಾರಣೆ ಮಾಡುವುದೋ ಅಥವಾ ಆಸರೆಯಾಗಿರುವುದೋ ಅದನ್ನು ಧರ್ಮ ಎನ್ನುತ್ತಾರೆ. ಪ್ರಜೆಗಳನ್ನು ಕಾಪಾಡುವುದೇ ಧರ್ಮ. ಯಾವುದು ಹೀಗೆ ಆಸರೆಯಾಗಿ ಪರಿಣಮಿಸುವುದೋ, ಅದರೊಂದಿಗೆ ಒಂದಾಗುವುದೋ, ಅದೂ ಕೂಡ ಧರ್ಮವೆಂದು ನಿಶ್ಚಯವಾಗಿ ತಿಳಿಯಬಹುದು ಎಂದು ಮಹಾಭಾರತದಲ್ಲಿ ಕರ್ಣ ಹೇಳುತ್ತಾನೆ. ಯಾವುದು ಧರ್ಮ, ಧಾರ್ಮಿಕ ನಡವಳಿಕೆ ಎಂದರೇನು ಎಂಬ ಪ್ರಶ್ನೆಗೆ, ಮನುಸ್ಮೃತಿಯಲ್ಲಿ ಹೀಗೆ ಹೇಳಿದೆ:

**ಧೃತಿಃ ಕ್ಷಮಾ ದಮೋಽಸ್ತೇಯಂ ಶೌಚಮಿಂದ್ರಿಯನಿಗ್ರಹಃ ।**
**ಧೀರ್ವಿದ್ಯಾ ಸತ್ಯಮಕ್ರೋಧೋ ದಶಕಂ ಧರ್ಮಲಕ್ಷಣಮ್ ॥**

ತೃಪ್ತಿ, ತಾಳ್ಮೆ, ಸಿಟ್ಟಾಗದಿರುವುದು, ಅನ್ಯಾಯದಿಂದ ಇತರರ ದ್ರವ್ಯವನ್ನು ತೆಗೆದುಕೊಳ್ಳದೇ ಇರುವುದು, ಶುಚಿಯಾಗಿರುವುದು, ಇಂದ್ರಿಯಗಳ ನಿಗ್ರಹ, ಬುದ್ಧಿವಂತಿಕೆ ಅಥವಾ ಮೇಧಾಶಕ್ತಿ, ಶಾಸ್ತ್ರಜ್ಞಾನ, ಸತ್ಯ ಹಾಗೂ ಶಾಂತಿ—ಇವು ಧರ್ಮದ ಹತ್ತು ಲಕ್ಷಣಗಳು.

ಸತ್ಯ, ಒಳ್ಳೆಯತನ ಹಾಗೂ ಶ್ರೇಷ್ಠತೆಗಳಂತಹ ಮೂಲಭೂತ ಮೌಲ್ಯಗಳು ಜೀವನದಲ್ಲಿ ವ್ಯಕ್ತವಾದಾಗ ಅದು ಧಾರ್ಮಿಕವಾಗುತ್ತದೆ. ಆಧ್ಯಾತ್ಮಿಕ ಜೀವನದ, ಸುಸಂಸ್ಕೃತ ಜೀವನದ ಪ್ರಥಮ ಹಂತವೇ ಧರ್ಮ. ಭಾರತೀಯ ಸಂಸ್ಕೃತಿಯ ವಿಶಿಷ್ಟತೆಯನ್ನು ಕಾಪಾಡಿಕೊಂಡು ಬಂದಿರುವುದೇ ಧರ್ಮ. ಎಲ್ಲ ಆಗುಹೋಗುಗಳನ್ನು ನಿಯಂತ್ರಿಸುವ ಶಾಶ್ವತವಾದ ಧರ್ಮ ಅಥವಾ ಋತಕ್ಕೆ ಅನುಗುಣವಾಗಿ ಮನುಷ್ಯ ನಡೆದುಕೊಳ್ಳಬೇಕು ಎಂದು ವೇದಗಳು ವಿಧಿಸುತ್ತವೆ— **ಧರ್ಮಂ ಚರ**. ರಾಜನು ಧಾರ್ಮಿಕನಾಗಿದ್ದರೆ ಸಿಂಹಾಸನವನ್ನು ಏರಬಹುದು ಎಂದು ಸಾಮಾನ್ಯ ಜನರೂ ಭಾವಿಸುತ್ತಿದ್ದರು. ಪದವಿಗಿಂತ ಅವನ ಧಾರ್ಮಿಕತೆಯೇ ಪ್ರಮುಖವಾಗಿತ್ತು. ಜನರನ್ನು, ಸಮಾಜವನ್ನು ಹಾಗೂ ಆಡಳಿತವನ್ನು ನಿಯಂತ್ರಿಸುತ್ತಿದ್ದ ನಿಯಮ ಧರ್ಮ. ಕೇವಲ ಕಾನೂನುಗಳ ಮೂಲಕವಲ್ಲದೆ, ಆಧ್ಯಾತ್ಮಿಕ ದೃಷ್ಟಿಯನ್ನು ಪ್ರೇರೇಪಿಸುತ್ತ ಪ್ರತಿಯೊಬ್ಬರೂ ಮುಂದುವರಿಯುವಂತೆ ಅವಕಾಶವನ್ನು ಧರ್ಮ ಕಲ್ಪಿಸುತ್ತದೆ. ಸ್ವಾಮಿ ವಿವೇಕಾನಂದರು ಹೇಳುವಂತೆ, "ಈ ಮಾನವ ಮೃಗವನ್ನು ದೇವಸದೃಶವನ್ನಾಗಿ ಮಾಡಬಲ್ಲದು ಧರ್ಮ. ಮಾನವ ಸಮಾಜದಿಂದ ಧರ್ಮವನ್ನು ತೆಗೆದುಬಿಟ್ಟರೆ ಉಳಿಯುವುದೇನು? ಬರೀ ಕಾಡುಮನುಷ್ಯರ ಹಿಂಡು" (ಬೋಧನೆಯ ಸಾರ. ಪುಟ. ೧೫೩).

'ಧರ್ಮ' ಎಂಬುವ ಪದಕ್ಕೆ ರೂಢಿಯಲ್ಲಿಯೂ ಕೂಡ ಗಹನವಾದ ಅರ್ಥವಿದೆ. ಒಂದು ವಸ್ತುವಿನ ಅಥವಾ ವ್ಯಕ್ತಿಯ ಮೂಲಸ್ವರೂಪ ಅಥವಾ ಅಂತಃಸತ್ತ್ವವನ್ನು ಧರ್ಮವೆನ್ನುತ್ತೇವೆ. ಉದಾಹರಣೆಗೆ, ಹರಿಯುವುದು ನೀರಿನ ಧರ್ಮ. ಸುಡುವುದು ಬೆಂಕಿಯ ಧರ್ಮ, ಚಲಿಸದೇ ಇರುವುದು ಜಡ ವಸ್ತುಗಳ ಧರ್ಮ ಇತ್ಯಾದಿ. ಒಂದು ವಸ್ತುವನ್ನು ಇತರ ವಸ್ತುಗಳಿಂದ ಪ್ರತ್ಯೇಕಿಸುವುದೇ ಅದರ ಧರ್ಮ. ಇತರ ಪ್ರಾಣಿಗಳಿಂದ ನಮ್ಮನ್ನು ಬೇರ್ಪಡಿಸುವ ಗುಣವೇ ಮಾನವಧರ್ಮ. ಯಾವುದು ಮಾನವಧರ್ಮವೆಂಬ ಪ್ರಶ್ನೆಗೆ ಹಿಂದೂಧರ್ಮ ಹೇಳುತ್ತದೆ: "ದೇವರಲ್ಲಿನ ಗುಣಗಳನ್ನು ರೂಢಿಸಿಕೊಂಡು ಆಧ್ಯಾತ್ಮಿಕವಾಗಿ ಪರಿಪೂರ್ಣನಾಗುವುದೇ ಮಾನವಧರ್ಮ." ಎಲ್ಲೆಡೆ, ಎಲ್ಲರಲ್ಲಿಯೂ ಇರುವ ದಿವ್ಯತೆಯ ಅಭಿವ್ಯಕ್ತಿಗೆ ಸಹಾಯಕವಾದುದೆಲ್ಲವೂ ಧರ್ಮ, ಅಡಚಣೆಗಳೆಲ್ಲವೂ ಅಧರ್ಮವೆಂಬುದೇ ಭಾರತೀಯ ಸಿದ್ಧಾಂತ. ಕಳ್ಳತನವನ್ನು ಮಾಡುವುದು ಕಳ್ಳನ ಧರ್ಮವಾದರೆ ಅವನಿಗೆ ತಕ್ಕ ಶಿಕ್ಷೆಯನ್ನು ವಿಧಿಸುವುದು ನ್ಯಾಯಾಧೀಶರ ಧರ್ಮ: ಪ್ರತಿಯೊಬ್ಬ ನಾಗರಿಕನಿಗೂ ರಕ್ಷಣೆಯನ್ನು ನೀಡುವುದು ಸರ್ಕಾರದ ಧರ್ಮ.

ಹೀಗೆ ಧರ್ಮವನ್ನು ಕುರಿತು ಆಲೋಚಿಸಿದರೆ ಇರುವುದು ಒಂದೇ ಧರ್ಮವೆಂದು ತಿಳಿದುಬರುತ್ತದೆ. ಅದರ ವಿಭಿನ್ನ ಅಂಗಗಳಾಗಿ ಇತರ ಮೌಲ್ಯಗಳನ್ನು ನಾವು ಗುರುತಿಸುತ್ತೇವೆ. ಇಡೀ ವಿಶ್ವವನ್ನೇ ನಿಯಂತ್ರಿಸುತ್ತಿರುವ ಋತ ಅಥವಾ ಧರ್ಮವೇ ವೈಯಕ್ತಿಕ ಮಟ್ಟದಲ್ಲೂ ಅಭಿವ್ಯಕ್ತಗೊಂಡಾಗ ವ್ಯಕ್ತಿಯ ಆಧ್ಯಾತ್ಮಿಕ ಆಯಾಮ ತೆರೆದುಕೊಳ್ಳುತ್ತದೆ. ಪ್ರತಿಯೊಬ್ಬ ವ್ಯಕ್ತಿಗೂ ಸಾಮಾಜಿಕ ಹಾಗೂ ವೈಯಕ್ತಿಕ ಆಯಾಮಗಳಿರುವ ಒಂದು ಧರ್ಮವಿದೆ. ಅವು ಪರಸ್ಪರ ವಿರೋಧವಾಗಿರಬಾರದು. ತನ್ನ ಹಿತ ಇತರರ ಅಹಿತಕ್ಕೆ ಕಾರಣವಾದರೆ ಅದು ಅಧರ್ಮವಾಗುತ್ತದೆ. ಧರ್ಮ ಹಾಗೂ ಅಧರ್ಮಗಳ ಕುರಿತು ವಿವೇಚನೆ ಬೆಳೆಯುವುದು ಶಿಕ್ಷಣದಿಂದ, ತಂದೆ ತಾಯಿಯರ, ಹಿರಿಯರ, ಶಿಕ್ಷಕರ ನಡೆನುಡಿಗಳನ್ನು ಗಮನಿಸುವುದರಿಂದ. ಸಾಮೂಹಿಕ ವರ್ತನೆಯು ವ್ಯಕ್ತಿಯ ನಡತೆ

**ಮನುಷ್ಯ ಜೀವಿಯೆನ್ನುವವ ಒಂದು ಸ್ವತಂತ್ರ ಘಟಕವಲ್ಲ. ಅವನು ಒಂದು ಜೀವಂತ ಸಮೂಹದ ಅಂಗವಷ್ಟೆ. ಪರ್ಯಾಯವಾಗಿ, ಸಮೂಹಗಳು ಜೀವಂತ ಮಾನವಕುಲವೆಂಬ ಸಮಷ್ಟಿಯ ಅಂಗಗಳು. — ಕೆ.ವಿ. ಸುಬ್ಬಣ್ಣ.**

ಯನ್ನು ನಿರ್ಧರಿಸುವಂತೆ ಕೆಲವು ವ್ಯಕ್ತಿಗಳು ಒಂದಾಗಿ ಪ್ರಯತ್ನಿಸುವುದರಿಂದ ಸಾಮೂಹಿಕ ವರ್ತನೆಯನ್ನು ಬದಲಾಯಿಸಲೂಬಹುದು.

### ಧರ್ಮದಿಂದ ಪ್ರಯೋಜನವಿದೆ

ರಾಜಕೀಯ ವಿಜ್ಞಾನಿ ಜೇಮ್ಸ್ ಕ್ಯೂ. ವಿಲ್ಸನ್ ಹಾಗೂ ಅಪರಾಧಶಾಸ್ತ್ರಜ್ಞ ಜಾರ್ಜ್ ಕೆಲ್ಲಿಂಗ್ ಒಂದು ಹೊಸ ಸಿದ್ಧಾಂತವನ್ನು ಮಂಡಿಸಿದ್ದಾರೆ. ವ್ಯಕ್ತಿಯ ಅಪರಾಧಿ ನಡವಳಿಕೆಯು ಪರಿಸರದ ಹಾಗೂ ಸಾಮೂಹಿಕ ಅವ್ಯವಸ್ಥೆಯ ಫಲವೆಂಬುದು ಅವರ ಹೇಳಿಕೆ. ರಸ್ತೆಯಲ್ಲಿ ಎಲ್ಲೆಂದರಲ್ಲಿ ಬಿಟ್ಟುಹೋಗಿರುವ ವಾಹನಗಳನ್ನು, ಗೋಡೆಗಳ ಮೇಲಿರುವ ಬರಹಗಳನ್ನು, ಒಡೆದಿರುವ ಗಾಜುಗಳಿರುವ ಕಿಟಕಿಗಳನ್ನು ನೋಡಿದಾಗ ಜನರಿಗೆ ಇಲ್ಲಿ ಯಾರೂ ಏನನ್ನೂ ಗಮನಿಸುವುದಿಲ್ಲ ಎಂದು ತಿಳಿದುಬರುತ್ತದೆ. ಈ ತಿಳಿವು ಅವರ ಮನಸ್ಸಿನ ಭಯ, ಅಪರಾಧ ಪ್ರಜ್ಞೆಯನ್ನು ಲೋಪವಾಗುವಂತೆ ಮಾಡಿ ಕೆಟ್ಟ ನಡತೆಗೆ ಪ್ರಚೋದಿಸುತ್ತದೆ. ಘರ್ಷಣೆಗಳಾದಾಗ ಒಬ್ಬ ವ್ಯಕ್ತಿ ಕಲ್ಲನ್ನು ಹೊಡೆದಾಗ ಅದನ್ನು ಯಾರೂ ನಿಯಂತ್ರಿಸಿ ಶಿಕ್ಷೆ ವಿಧಿಸದಿದ್ದರೆ, ಅದನ್ನು ಕಂಡ ಇತರರಿಗೂ ಕಲ್ಲು ತೂರಲು ಪ್ರೇರೇಪಣೆ ಬರುತ್ತದೆ. ಸಾಮಾನ್ಯವಾಗಿ ಅಂತಹ ಕ್ರೌರ್ಯ, ಹಿಂಸೆಗಳಲ್ಲಿ ತೊಡಗದೇ ಇರುವವರೂ ಆ ಘಳಿಗೆಯಲ್ಲಿ ಅಪರಾಧವೆಸಗುತ್ತಾರೆ. ಆದ್ದರಿಂದ ಪರಿಸರದ ಶುಚಿತ್ವ, ವ್ಯವಸ್ಥಿತ ರೀತಿ ಇವುಗಳೆಲ್ಲ ಪ್ರಮುಖ ಪಾತ್ರವನ್ನು ಹೊಂದಿವೆ. ನ್ಯೂಯಾರ್ಕಿನ ಒಂದು ಪ್ರದೇಶದಲ್ಲಿ ಈ ಸಿದ್ಧಾಂತವನ್ನು ಪ್ರಯೋಗ ಮಾಡಿ ನೋಡಿದಾಗ ಗಮನಾರ್ಹ ಬದಲಾವಣೆ ಕಂಡುಬಂದಿತು ಎಂದು ಫಿಲಿಪ್. ಜಿ. ಜಿಮ್‌ಬಾರ್ಡೋ ಹೇಳುತ್ತಾರೆ. ಕೆಟ್ಟ ನಡತೆ ಎಂಬುದು ಒಂದು ತಾತ್ಕಾಲಿಕವಾದ ಸ್ಥಿತಿ. ವ್ಯಕ್ತಿಯು ಮೂಲತಃ ಧಾರ್ಮಿಕನಾಗಿಯೇ ಇರುತ್ತಾನೆ. ಇದೇ ಅವನಲ್ಲಿರುವ ದೈವಾಂಶದ ಪ್ರತೀಕ ಎಂಬುದನ್ನು ಈ ಸಿದ್ಧಾಂತ ಸಾಬೀತು ಪಡಿಸುತ್ತದೆ. ಒಳಗೆ ಹುದುಗಿರುವ ಒಳ್ಳೆಯತನವನ್ನು ಹೊರತೆಗೆದು, ಕಾರ್ಯರೂಪಕ್ಕೆ ತಂದು ತಾನೂ, ಸಮಾಜವೂ ಉತ್ತಮವಾಗಬೇಕೆಂಬ ಆದರ್ಶವುಳ್ಳವನೇ ನಿಜವಾಗಿಯೂ ಧಾರ್ಮಿಕ.

ಇತರರು ಧಾರ್ಮಿಕರಾಗಲಿ, ನಂತರ ನಾನಾಗುವೆ ಎಂಬ ಮಾತು ಸದಾ ಕೇಳಿಬರುತ್ತದೆ. ಇದು ತಪ್ಪಿಸಿಕೊಳ್ಳಲು ಹೇಳುವ ಮಾತು, ಪೊಳ್ಳು ಮಾತು ಎಂದೇ ಹೇಳಬಹುದು. ಎಲ್ಲರೂ ಧಾರ್ಮಿಕರಾಗಿರುವುದು ಸಾಧ್ಯವಿಲ್ಲ. ನಾನು ಏನಾಗಿದ್ದೇನೆ ಎಂಬುದೇ ಮುಖ್ಯವಾದ ಅಂಶ. ಬೇರೆಯವರ ದೋಷವನ್ನು ತಿದ್ದುವುದಕ್ಕಿಂತ ನಮ್ಮನ್ನು ನಾವು ಸರಿಪಡಿಸಿಕೊಳ್ಳುವುದೇ ಉತ್ತಮ. ಹೀಗೆ ಪ್ರತಿಯೊಬ್ಬರೂ ತಮ್ಮ ಜೀವನವನ್ನು ಓರಣಗೊಳಿಸಿಕೊಂಡರೆ ಸಮಾಜವೂ ಉತ್ತಮವಾಗುವುದು. ಒಳ್ಳೆಯ ಕೆಲಸ ನಮ್ಮಿಂದಲೇ ಪ್ರಾರಂಭವಾಗಲಿ ಎಂಬ ನಿಲುವು ಇದ್ದರೆ ಅದಕ್ಕೆ ಪೂರಕವಾದ ಶಕ್ತಿ, ಸ್ಫೂರ್ತಿಗಳೂ ಸಮಾನಮನಸ್ಕರಿಂದ ಲಭಿಸುತ್ತವೆ.

ಉಜ್ವಲವಾದ ಭಾರತ ನಿರ್ಮಾಣವಾಗಿ, ಮುಂದಿನ ಪೀಳಿಗೆಗಳು ತಲೆಯೆತ್ತಿ ನಡೆಯುವಂತಾಗಲು ಧರ್ಮವನ್ನು ಹಾಗೂ ಅದರ ಅಂಗಗಳಾದ ಸತ್ಯ, ಶುಚಿತ್ವ, ಜ್ಞಾನಾಸಕ್ತಿಗಳನ್ನು ರೂಢಿಗೆ ತರುವುದು ಅತ್ಯಾವಶ್ಯಕ. ನೈತಿಕತೆಯನ್ನು ಸಾಧಿಸದೆ, ಮೌಲ್ಯಗಳನ್ನು ರೂಢಿಸಿಕೊಳ್ಳದೆ ಶಾಶ್ವತವಾದ ಪ್ರಗತಿ ಸಾಧ್ಯವಾಗುವುದಿಲ್ಲ. ಧಾರ್ಮಿಕವಾಗಿದ್ದು ಸುಖವನ್ನು ಅನುಭವಿಸುವುದೇ ಭಾರತೀಯ ಆದರ್ಶ. ತಳದಲ್ಲಿ ಧರ್ಮವಿದ್ದರೆ ಮೇಲಿನ ಕಟ್ಟಡಗಳು ಸುಭದ್ರವಾಗಿರುತ್ತವೆ. ಧರ್ಮಕ್ಕೆ ವಿರುದ್ಧವಲ್ಲದ ಕಾಮ ಅಥವಾ ಬಯಕೆ ನಾನು ಎಂದು ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಹೇಳುತ್ತಾನೆ. ಭ್ರಷ್ಟಾಚಾರ, ಅರಾಜಕತೆಗಳನ್ನು ಹೋಗಲಾಡಿಸಲು ಧರ್ಮವೊಂದೇ ಮಾರ್ಗ. ಇತರ ಎಲ್ಲ ಸುಧಾರಣೆಗಳೂ ತಾತ್ಕಾಲಿಕವಾದ ಪರಿಹಾರವನ್ನು ಮಾತ್ರ ನೀಡಬಲ್ಲವು. ಕೆಲವೊಮ್ಮೆ ಹೊಸ ಸಮಸ್ಯೆಗಳಿಗೂ ಅವು ಕಾರಣವಾಗಬಹುದು. ವ್ಯಕ್ತಿಯು ತನ್ನಲ್ಲಿರುವ ಒಳ್ಳೆಯತನಕ್ಕೆ ಅವಕಾಶ ಕೊಟ್ಟು ಜೊತೆಜೊತೆಗೇ ಸುತ್ತಲೂ ಬೆಳೆದಿರುವ ಕಳೆ, ಕಸಗಳನ್ನು ತೆಗೆದುಹಾಕಬೇಕು. ರಾಜಕೀಯ ಶಾಸನ ಹಾಗೂ ಕಾನೂನು ವ್ಯವಸ್ಥೆಗಳೂ ಕೂಡ ವ್ಯಕ್ತಿಗಳ ಧಾರ್ಮಿಕ ಪ್ರಜ್ಞೆಯನ್ನು ಜಾಗೃತಗೊಳಿಸುವ ಪ್ರಯತ್ನವನ್ನು ಮಾಡಿದರೆ ಸಹಜವಾಗಿ ಉತ್ತಮ ಸಮಾಜಗಳು ನಿರ್ಮಾಣಗೊಳ್ಳುತ್ತವೆ.

ಇದು ಇಂದು ಆಗಬೇಕಾಗಿರುವ ಕಾರ್ಯ. ಧರ್ಮವು ನಂಬಿಕೆಯಲ್ಲಿಲ್ಲ, ಆಚರಣೆಯಲ್ಲಿದೆ, ಉತ್ತಮ ವ್ಯಕ್ತಿಯಾಗುವಲ್ಲಿ ಇದೆ, ಪ್ರಜ್ಞಾವಂತ ನಾಗರಿಕನಾಗುವಲ್ಲಿ ಇದೆ, ಸತ್ಪ್ರಜೆಯಾಗುವಲ್ಲಿ ಇದೆ. ✪